**<u>ಸಾಕ್ಷಿಗೆ ದಿನಾಂಕ 29.01.2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:</u>**

**1.** ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 25 | ಡಿಸ್‌ಜಾರ್ಜ್ ಸಮ್ಮರಿ |
| ನಿ.ಪಿ 26 | 5 ಮೆಡಿಕಲ್ ಬಿಲ್ ಗಳು (ಅವುಗಳನ್ನು ಕ್ರಮವಾಗಿ ಕ್ರಮ ಸಂಖ್ಯೆ 1 ರಿಂದ 5 ಎಂದು ತೋರಿಸಲಾಗಿರುತ್ತದೆ.) |
| ನಿ.ಪಿ 27 ರಿಂದ 31 | 5 ಛಾಯಚಿತ್ರಗಳು |
| ನಿ.ಪಿ 32 | ಸಿಡಿ |

**3.** ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ಎನ್.ಮಹೇಶ್ ಪ್ರಸಾದ್ ವಕೀಲರಿಂದ:</u>**

ಈಗ ನಾನು ಸಲ್ಲಿಸಿರುವ ನಿ.ಪಿ.25 ಮತ್ತು 26 ಕಣ್ಣಿನ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿರುತ್ತದೆ. ಸದರಿ ಶಸ್ತ ಚಿಕಿತ್ಸೆಯನ್ನು 2024 ರಲ್ಲಿ ಮಾಡಿಸಲಾಗಿದೆ ಎಂದರೆ ಸರಿ. ಅಪಘಾತವಾದ ಎರಡು ವರ್ಷಗಳ ನಂತರ ಕಣ್ಣಿಗೆ ಶಸ್ರ ಚಿಕಿತ್ಸೆ ಮಾಡಿಸಲಾಗಿದೆ ಎಂದರೆ ಸರಿ. ಕಣ್ಣಿಗೆ ಪೊರೆ ಬಂದಿರಲಿಲ್ಲ, ಅಪಘಾತದಿಂದ ಕಣ್ಣು ಕಾಣಿಸುತ್ತಿರಲಿಲ್ಲ. ಅಪಘಾತದಿಂದ ಕಣ್ಣು ಕಾಣಿಸುತ್ತಿಲ್ಲ ಎಂದು ವೈದ್ಯರು ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಈಗಲೂ ಸಹ ಕಣ್ಣು ಕಾಣಿಸುತ್ತಿಲ್ಲ. ಈಗಲೂ ಸಹ ಕಣ್ಣು ಕಾಣಿಸುತ್ತಿಲ್ಲ ಎಂದು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ಅಪಘಾತದಿಂದ ಅರ್ಜಿದಾರರ ಕಣ್ಣಿಗೆ ಸಮಸ್ಯೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ

ಅರ್ಜಿದಾರರ ಕಣ್ಣಿಗೆ ತೊಂದರೆ ಆಗದೇ ಇದ್ದ ಕಾರಣ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.26 ರ ವೈದ್ಯಕೀಯ ಬಿಲ್ ಗಳು ಸೃಷ್ಠಿತ ಬಿಲ್ಲುಗಳು ಎಂದರೆ ಸರಿಯಲ್ಲ. ನಿ.ಪಿ.27 ರಿಂದ 31 ಭಾವಚಿತ್ರಗಳನ್ನು ಹೆಚ್ಚಿ ನ ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕಣ್ಣು ಕಾಣಿಸುವುದಿಲ್ಲ ಎಂದು ವೈದ್ಯರ ಸಾಕ್ಷ್ಯ ಮಾಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಅನಾರೋಗ್ಯದಿಂದ ತೊಂದರೆ ಆಗಿದ್ದರೂ ಸಹ ಅಪಘಾತದಿಂದಆಗಿದೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1ನೇ ಎದುರುದಾರ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರಾಗಿದ್ದು, ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ: ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**